ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 10 ನೇ ಮಾರ್ಚ್, 2020

ಮೈಸೂರು ನಗರಕ್ಕೆ ಕೃಷ್ಣರಾಜಸಾಗರ ಹಿನ್ನೀರಿನ ಉಂಡವಾಡಿ ಬಳಿಯಿಂದ ನೀರು ಸರಬರಾಜು ಮಾಡುವ ಕುರಿತು

ಶ್ರೀ ಎಸ್. ನಾಗರಾಜ್(ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

565 (592) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ನಗರದ ಹೊಸ ಬಡಾವಣೆಗಳಿಗೆ ಕೃಷ್ಣರಾಜಸಾಗರ ಹಿನ್ನೀರಿನ ಬಳಿಯ ಉಂಡವಾಡಿ ಗ್ರಾಮದ ಬಳಿಯಿಂದ ಕುಡಿಯುವ ನೀರಿನ ಪೂರೈಕೆ ಯೋಜನೆಯನ್ನು ರೂಪಿಸಲಾಗಿದೆಯೇ; ಯೋಜನೆ ಯಾವ ಹಂತದಲ್ಲಿದೆ; ಯಾವಾಗ ಪೂರ್ಣಗೊಳಿಸಲಾಗುವುದು; (ವಿವರಗಳನ್ನು ಒದಗಿಸುವುದು);

(ಆ) ಈ ಬಗ್ಗೆ ಯೋಜನೆ ರೂಪಿಸದೇ ಇದ್ದಲ್ಲಿ, ಹೊಸದಾಗಿ ಕೂಡಲೇ ಯೋಜನೆಯನ್ನು ರೂಪಿಸಿ, ಮೈಸೂರು ನಗರದ ಹೊಸ ಬಡಾವಣೆಗಳಿಗೆ ಕುಡಿಯುವ ನೀರನ್ನು ಒದಗಿಸಲು ಕ್ರಮ ಜರುಗಿಸಲಾಗುವುದೇ?